**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/260/ಪಿಹೆಚ್‌ಡಿ/ಎಂಫಿಲ್/2016-17/ಸೇವಿ-1 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:15-06-2018.

**ಸುತ್ತೋಲೆ**

ವಿಷಯ: ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ

******

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ/ ಕಾನೂನು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ ಪಿ.ಹೆಚ್.ಡಿ ಪದವಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರುಗೊಳಿಸುವ ಸಂಬಂಧದಲ್ಲಿ ಈ ಕೆಳಕಂಡ ಸೂಚನೆಗಳನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಲ್ಲಿಸುವಂತೆ ಪ್ರಾಂಶುಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

1. ಈಗಾಗಲೇ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರು ಮಾಡಲಾದ ಪ್ರಕರಣಗಳಲ್ಲಿ ಪಿ.ಹೆಚ್.ಡಿ ಪದವಿ ಪಡೆದ ದಿನಾಂಕದಂದು ಎ.ಜಿ.ಪಿ ರೂ.6000 ರಿಂದ 7000ಕ್ಕೆ ಅರ್ಹರಿದ್ದಾಗ್ಯೂ ಉನ್ನತ ಎ.ಜಿ.ಪಿ ಮಂಜೂರಾತಿ ಪಡೆಯದೇ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ರೂ.6000/- ಎ.ಜಿ.ಪಿಯನ್ನು ಪರಿಗಣಿಸಿ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ ರೂ.7000/-ಗಳ ಉನ್ನತ ಎ.ಜಿ.ಪಿ ಮಂಜೂರಾತಿ ಆದೇಶವನ್ನು ಅರ್ಹತಾ ದಿನಾಂಕದಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದ ನಂತರದಲ್ಲಿ ಮತ್ತೊಮ್ಮೆ ಪಿ.ಹೆಚ್.ಡಿ ಮುಂಗಡ ವೇತನ ದರವನ್ನು ಪರಿಷ್ಕರಿಸಬೇಕಾಗುತ್ತದೆ. ಮಹಾಲೇಖಪಾಲರು ಇಂತಹ ಅನೇಕ ಪ್ರಕರಣಗಳಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದನ್ನು ಗಮನಿಸಲಾಗಿದೆ.

| ಉದಾಹರಣೆ:- | | | | |
|---|---|---|---|---|
| | 1. | "ಎ" ಬೋಧಕರ ನೇಮಕಾತಿ ದಿನಾಂಕ | - | 03-09-2009 |
| | 2. | ರೂ.7000/- ಎ.ಜಿ.ಪಿಗೆ ಅರ್ಹತೆ ಪಡೆದ ದಿನಾಂಕ | - | 03-09-2015 |
| | 3. | ಪಿ.ಹೆಚ್.ಡಿ ಪದವಿ ಪಡೆದ ದಿನಾಂಕ | - | 06-10-2015 |
| | 4. | ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರಾದ ಆದೇಶದ ದಿನಾಂಕ | - | 26-12-2015 |
| | 5. | ಉನ್ನತ ಎ.ಜಿ.ಪಿ ಮಂಜೂರಾತಿ ಆದೇಶದ ದಿನಾಂಕ | - | 20-01-2016 |

ಇಂತಹ ಪ್ರಕರಣಗಳಲ್ಲಿ ರೂ.6000/- ಎ.ಜಿ.ಪಿಯನ್ನು ಪರಿಗಣಿಸಿ ದಿನಾಂಕ:06-10-2015 ರಿಂದ ಅನ್ವಯವಾಗುವಂತೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿದಲ್ಲಿ ದಿನಾಂಕ:03-09-2015 ರಿಂದ ಪೂರ್ವಾನ್ವಯವಾಗುವಂತೆ ದಿನಾಂಕ:20-01-2016ರಲ್ಲಿ ಉನ್ನತ

ಎ.ಜಿ.ಪಿ ಆದೇಶ ಹೊರಡಿಸಿದ ನಂತರದಲ್ಲಿ ಮತ್ತೊಮ್ಮೆ ರೂ.7000/- ಎ.ಜಿ.ಪಿಯನ್ನು ಪರಿಗಣಿಸಿ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸಬೇಕಾಗುತ್ತದೆ. ಆದ್ದರಿಂದ ಈ ರೀತಿಯ ಪ್ರಕರಣಗಳಲ್ಲಿ ರೂ.7000/- ಎ.ಜಿ.ಪಿ ಮಂಜೂರಾತಿಯ ನಂತರ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

6. ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳ ಮಂಜೂರಾತಿಯ ನಂತರ ಸೇವಾ ಅವಧಿಯಲ್ಲಿ ಎ.ಜಿ.ಪಿಯಲ್ಲಿ ವಿನಾಯಿತಿ ಪಡೆಯಲಿಚ್ಛಿಸಿ ಮಂಜೂರು ಮಾಡಲಾದ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ರದ್ದು ಮಾಡಲು ಕೋರಿ ಮನವಿಗಳು ಸ್ವೀಕೃತವಾಗುತ್ತಿದ್ದು ಅನವಶ್ಯಕ ಗೊಂದಲ ಉಂಟಾಗುತ್ತಿದ್ದು ಮುಂಗಡ ವೇತನ ಬಡ್ತಿಯ ಸೌಲಭ್ಯವನ್ನೇ ಪಡೆಯಲಿಚ್ಛಿಸಿರುವುದಾಗಿ ಮುಚ್ಚಳಿಕೆ ಪಡೆದು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ ಹಾಗೂ ಮುಂಗಡ ವೇತನ ಬಡ್ತಿಗಳ ಮಂಜೂರಾದ ನಂತರ ಬಡ್ತಿಗಳನ್ನು ರದ್ದು ಪಡಿಸಲಾಗುವುದಿಲ್ಲ ಮತ್ತು ಈ ಬಗ್ಗೆ ಸ್ವೀಕೃತವಾಗುವ ಎಲ್ಲಾ ಮನವಿಗಳನ್ನು ತಿರಸ್ಕರಿಸಲಾಗುವುದು ಎಂಬ ಅಂಶವನ್ನು ಉಪನ್ಯಾಸಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ. ಮುಚ್ಚಳಿಕೆ ಪತ್ರ ನೀಡಿಲ್ಲದ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

7. ಎಂ.ಫಿಲ್/ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಸಂಬಂಧ ಪ್ರಾಂಶುಪಾಲರುಗಳು ಪ್ರಸ್ತಾವನೆ ಸಲ್ಲಿಸುವ ಮುನ್ನ ಸರ್ಕಾರ/ಇಲಾಖೆ ಹೊರಡಿಸಿರುವ ಸುತ್ತೋಲೆ/ಆದೇಶಗಳನ್ವಯ ಪರಿಶೀಲಿಸಿ ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

Shilpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಆಯುಕ್ತರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
5. ಮುಖ್ಯ ಆಡಳಿತಾಧಿಕಾರಿಗಳ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
6. ಮ್ಯಾನೇಜರ್/ಅಧೀಕ್ಷಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
7. ಕಛೇರಿ ಪ್ರತಿ.

260-Phd Mphil Advance increment